



ರಾಜ, ರೋರರ್, ರಾಕೆಟ್, ರಾಣಿ ಮತ್ತೆ ನಿಧಾನವಾಗಿ ಮೈದುಂಬಿಕೊಳ್ಳುತ್ತಿವೆ. ರಾಜಗಾಂಭೀರ್ಯ, ಕಿವಿಗಡಚಿಕ್ಕುವ ಸದ್ದು, ನೆಲದ ಸೆಳೆತದ ಕಾತರ, ನೃತ್ಯಾಂಗನೆಯ ಬಾಗು ಬಳುಕಿನ ಸೊಬಗು – ಇವೆಲ್ಲವೂ ಜೋಗದ ಒಡಲಿನಲ್ಲಿ ಒಡಮೂಡುತ್ತಿವೆ.

ಈ ಮಳೆಗಾಲ ನಾಡಿಗೆ, ಮಲೆನಾಡಿಗೆ ಸಮೃದ್ಧವಾಗಿಯೇನೂ ಇಲ್ಲ. ಕೊರತೆಯ ನಡುವೆಯೂ ಸಾಂತ್ವನ ಹೇಳುವಂತೆ ಆಗೊಮ್ಮೆ ಈಗೊಮ್ಮೆ ಸುಳಿಯುತ್ತಿರುವ ಮಳೆರಾಯನ ಹಾಜರಿಯೇ ಜೋಗಕ್ಕೆ ಜೀವಸ್ಪರ್ಶ ನೀಡಿದೆ. ಜೋಗದ ಪರಿಸರದಲ್ಲೀಗ ಜಾತ್ರೆಯ ಸಂಭ್ರಮ. ನೀರ ಎಳೆ ಸಣ್ಣದಾಗಿದ್ದರೂ ಪ್ರವಾಸಿಗರ ಸಂದಣಿಯೇನೂ ಕಡಿಮೆಯಿಲ್ಲ.

ಜೋಗದ ಖ್ಯಾತಿ ಒಂದೆರಡಲ್ಲ. 829 ಅಡಿ ಎತ್ತರದಿಂದ ನಾಲ್ಕು ಕವಲುಗಳಾಗಿ ಧುಮ್ಮಿಕ್ಕುವ ಜೋಗ, ದೇಶದಲ್ಲೇ ಅತಿ ಎತ್ತರದ ಎರಡನೇ ಜಲಪಾತ. ಕಾಡು–ಗುಡ್ಡಗಳಿಂದ ಆವೃತವಾದ ಪ್ರದೇಶದಲ್ಲಿ ಶರಾವತಿ ಜೋಗದ ಗುಂಡಿಯಲ್ಲಿ ಧುಮ್ಮಿಕ್ಕುವ ಮೂಲಕ ನಯನ ಮನೋಹರ ದೃಶ್ಯವನ್ನು ಸೃಷ್ಟಿಸಿದ್ದಾಳೆ. ಎತ್ತ ನೋಡಿದರೂ ಕಣ್ತುಂಬುವ ಹಸಿರು, ಮೈಮನಗಳಿಗೆ ಕಚಗುಳಿಯಿಡುವ ಕುಳಿರ್ಗಾಳಿ, ಜಲಪಾತದ ಪರಿಸರವನ್ನು ಕವಿದುಕೊಳ್ಳುವ ಹಿಮದ ಪರದೆ, ನೀರು ಬೆಳಕಿನ ಕಣ್ಣಮುಚ್ಚಾಲೆಯಲ್ಲಿ ರೂಪುಗೊಳ್ಳುವ ಕಾಮನಬಿಲ್ಲಿನ ವಿಲಾಸ – ಹೀಗೆ ಜೋಗದ ಸೌಂದರ್ಯದ ಸಾಧ್ಯತೆಗಳು ಅಪಾರ. ಆ ಕಾರಣದಿಂದಲೇ ಜೋಗದ ಸನ್ನಿಧಿದಲ್ಲಿ ಪ್ರವಾಸಿಗರ ಪರಿಷೆ.

ಜಿಲ್ಲಾ ಕೇಂದ್ರ ಶಿವಮೊಗ್ಗದಿಂದ ಜೋಗಕ್ಕೆ 100 ಕಿ.ಮೀ. ದೂರದ ದಾರಿ. ಸಾಗರ ತಾಲ್ಲೂಕಿನ ತಾಳಗುಪ್ಪ ರೈಲ್ವೆ ನಿಲ್ದಾಣಕ್ಕೆ 16 ಕಿ.ಮೀ. ಶಿವಮೊಗ್ಗದಿಂದ ಸಾಗರಕ್ಕೆ, ಅಲ್ಲಿಂದ ಜೋಗಕ್ಕೆ ಬಸ್ ಸಂಪರ್ಕ ಚೆನ್ನಾಗಿದೆ. ಅಂದಹಾಗೆ, ಜೋಗ ನೋಡಲು ಹೋಗುವಾಗ ಜೊತೆಗೆ ತಿನಿಸು–ನೀರನ್ನು ಒಯ್ಯುವುದು ಒಳ್ಳೆಯದು.